ಬೇಸಿಗೆಯಲ್ಲಿ ನನ್ನ ಬಳಿ ಇರಲು ಡೆನ್ಮಾರ್ಕ್‌ಗೆ ಬರುತ್ತಿದ್ದ. ಚಳಿಗಾಲದಲ್ಲಿ ನಾವು ಇಂಡಿಯಾ, ಮಲಪ್ಪುರಮ್‌ಗೆ ಹೋಗಿ ಅಪ್ಪನ ಮನೆಯಲ್ಲಿ ಭೇಟಿಯಾಗುತ್ತಿದ್ದೆವು. ಕೀನ್ಯಾವನ್ನು ಬಿಟ್ಟ ನಂತರ, ನಾನು ಅಲ್ಲಿಗೆ ಒಮ್ಮೆ ಮಾತ್ರ ಹೋಗಿದ್ದೆ. ಆ ದಿನಗಳಲ್ಲಿ ಅಬ್ರಾಹಮ್‌ನನ್ನು ಚರ್ಚ್‌ನಿಂದ ತೆಗೆದುಹಾಕಲಾಗಿತ್ತು. ಅಂಥ ಪಾಪಿ ಪಾದರಿಯಿಂದ ಚರ್ಚ್ ಮುಕ್ತವಾಗಲೇ ಬೇಕಿತ್ತು. ನಂತರ ಯಾವ ಉದ್ದೇಶದಿಂದ ಅಲ್ಲಿಗೆ ಹೋಗಲಿ? ನನಗೆ ಮೊಮ್ಬಾಸಾ ಬಗ್ಗೆ ತುಂಬಾ ಪ್ರೀತಿಯಿತ್ತು. ಅಬ್ರಾಹಮ್ ಮತ್ತು ಜೋಶ್ ಮೊಮ್ಬಾಸಾದಿಂದ ನೈರೋಬಿಗೆ ಹೋಗಿ ನೆಲೆಸಿದ್ದರು.

***

ನನಗೆ ಪಕ್ಕದ ಮನೆಗೆ ಹೋಗಬೇಕೆನಿಸಿದಾಗ ಒಂದು ಸುತ್ತು ಹಾಕಿ ಬರುತ್ತಿದ್ದೆ. ನನ್ನ ಮಣ್ಣಿನ ವಾಸನೆ, ನನ್ನ ಹಳೆಯ ವಾತಾವರಣ, ನನ್ನ ಭಾಷೆಯ ಗಂಧ... ನಾನು ನನ್ನ ಮೂಲ ಜಾಗದಿಂದ ಪಲಾಯನಗೈದು, ನನ್ನ ಮಾತೃಭಾಷೆಯಿಂದಲೂ ಸಹ ದೂರಕ್ಕೆ ಹೋಗುತ್ತಿದ್ದೆ. ನನ್ನ ಗೃಹ–ನಗರವನ್ನು ಸುತ್ತು ಹಾಕಿದಾಗ ನನ್ನ ಭಾಷೆಯನ್ನು ಸಹ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೆ.

ನಗರ ತುಂಬಾ ಬದಲಾಗಿತ್ತು, ಆದರೆ ಇದು ನನ್ನ ನಗರ ಮಲಪ್ಪುರಮ್ ಆಗಿತ್ತು. ಇಲ್ಲಿ ನಾನು ಬೆಳೆದಿದ್ದೆ. ಇಲ್ಲಿಯ ಗಲ್ಲಿಗಳು – ರಸ್ತೆಗಳು – ಸರ್ಕಲ್‌ಗಳು ಸಹ ನನಗೆ ಇಂದೂ ನೆನಪಿದ್ದವು. ನೆರೆಹೊರೆಯಲ್ಲಿ ನನ್ನ ಬಂಧು–ಬಳಗದವರೇ ಇದ್ದರು. ಕುಂಜಮ್ಮಾಳ ಮನೆ, ಪಾಪುನ್ ಮನೆ, ನಾನು ಬಾಲ್ಯದಿಂದಲೂ ಬಲ್ಲ ಹಳೆಯ ನೆರೆಮನೆಯವರು ಹಾಗೂ ಅನೇಕ ಸಂಬಂಧಿಕರನ್ನು ನಾನು ಬಾಲ್ಯದಿಂದಲೇ ಬಲ್ಲೆ. ಬಾಲ್ಯದ ಎಲ್ಲಾ ಸ್ನೇಹಿತರು ಅಲ್ಲಿ ಇಲ್ಲಿ ಚದುರಿ ಹೋಗಿದ್ದರು; ಎಲ್ಲರಿಗೂ ಮದುವೆಯಾಗಿದ್ದು, ಈಗ ಅವರದೇ ಆದ ಪರಿವಾರವಿತ್ತು.

ಮನೆಗೆ ಬಂದರೆ ಒಂದು ಲಾಭವಿತ್ತು. ನಮ್ಮ ಹಳೆಯ, ಬಾಲ್ಯದ ಮಿತ್ರರನ್ನು ನೋಡುವ, ಭೇಟಿಯಾಗುವ ಅವಕಾಶ ಲಭಿಸುತ್ತದೆ. ಆ ದಿನಗಳಲ್ಲಿ ಸಕೀನಾ ತನ್ನ ತವರಿಗೆ ಬಂದಿದ್ದಳು. ಅವಳ ಮಕ್ಕಳು ಮತ್ತು ಗಂಡ ಹೈದರಾಬಾದಿನಲ್ಲಿದ್ದರು. ಅವಳ ಅಬ್ಬಾಜಾನ್ ಈಚೆಗಷ್ಟೇ ನಿಧನರಾಗಿದ್ದರು. ಅಬ್ಬಾಜಾನ್ ಹೋದ ನಂತರ ಅಮ್ಮಿಜಾನ್ ಒಂಟಿಯಾದಳು. ಅವಳಿಗಿಂತ ಆರು ವರ್ಷ ಚಿಕ್ಕವನಾಗಿದ್ದ ತಮ್ಮ ಅನಾಸ್, ಲಂಡನ್ನಿನ ಫೈವ್ ಸ್ಟಾರ್ ಹೊಟೇಲ್‌ವೊಂದರಲ್ಲಿ ಅಡುಗೆ ಭಟ್ಟನಾಗಿದ್ದು, ತನ್ನ ಪರಿವಾರದೊಂದಿಗೆ ಅಲ್ಲಿಯೇ ನೆಲೆಸಿದ. ಸಕೀನಾಳ ಅಮ್ಮಿಗೆ ನಾವು 'ರೂಬಿ ಆಂಟಿ' ಎಂದು ಕರೆಯುತ್ತಿದ್ದೆವು; ರೂಬಿ ಆಂಟಿ ಒಂಟಿತನವನ್ನು ಮನಗಾಣಬಾರದೆಂದು ಹಾಗೂ ತಮ್ಮ ದುಃಖದಿಂದ ಹೊರ ಬರಲೆಂದು ಸಕೀನಾ ಅವರೊಂದಿಗಿದ್ದಳು.

ನಾನು ನಿತ್ಯ ಸಕೀನಾಳನ್ನು ಭೇಟಿಯಾಗುತ್ತಿದ್ದೆ. ನಮ್ಮ ಮನೆಗಳ ನಡುವೆ ಗೋಡೆಯೊಂದು ಅಡ್ಡವಿತ್ತು. ಒಮ್ಮೆ ಅವಳು ನಮ್ಮ ಮನೆಗೆ ಬಂದರೆ, ಇನ್ನೊಮ್ಮೆ ನಾನು ಅವಳ ಮನೆಗೆ ಹೋಗುತ್ತಿದ್ದೆ. ಒಮ್ಮೊಮ್ಮೆ ನಾವು ನದಿಯ ತೀರದಲ್ಲಿ ಕೂತು, ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದೆವು. ಮಳೆಗಾಲದಲ್ಲಿ ಈ ನದಿ ನಮ್ಮ ಕಾಂಪೌಂಡಿನವರೆಗೂ ಬರುತ್ತಿತ್ತು, ನಮ್ಮ ಮರ–ಗಿಡಗಳು ನೀರಿನಲ್ಲಿ ಮುಳುಗಿರುತ್ತಿದ್ದವು. ಬೇಸಿಗೆಯ ಮಧ್ಯಾಹ್ನದ ವೇಳೆಯಲ್ಲಿ ನಾವು ನದಿಗೆ ಈಜಲು ಹೋಗುತ್ತಿದ್ದೆವು, ಕುಣಿದಾಡುತ್ತಿದ್ದೆವು. ಸಕೀನಾ ಹೇಳಿದಳು, 'ಈಗ ಈ ನದಿ ಒಂದು ಕಾಲುವೆಯಾಗಿದೆ.'

ನನಗೆ ಸಕೀನಾಳ ಮನೆಗೆ ಹೋಗುವುದು ತುಂಬಾ ಇಷ್ಟವಾಗುತ್ತಿತ್ತು. ಅವರದು ಸಹೃದಯ ಪರಿವಾರವಾಗಿತ್ತು. ಅಲ್ಲಿ ಆತ್ಮೀಯತೆಯ ಅನುಭವವಾಗುತ್ತಿತ್ತು, ಚೆನ್ನಾಗಿ ಸತ್ಕರಿಸಲಾಗುತ್ತಿತ್ತು. ಅವರ ಅಬ್ಬಾಜಾನ್ ಡೆಂಟಿಸ್ಟ್ ಆಗಿದ್ದರು, ಅವರದೇ ಆದ ಕ್ಲಿನಿಕ್ ತೆರೆದಿದ್ದರು. ನಮಗೇನಾದರೂ ಹಲ್ಲಿನ ಸಮಸ್ಯೆ ಬಂದರೆ, ನೇರವಾಗಿ ಅವರ ಕ್ಲಿನಿಕ್‌ಗೆ ಹೋಗುತ್ತಿದ್ದೆವು. ಆದರೆ ಎರಡು ಮನೆಯ ಹಗೆತನದಿಂದಾಗಿ ಹತ್ತು ವರ್ಷಗಳವರೆಗೆ ನಾವು ಒಬ್ಬರ ಮನೆಗೆ ಒಬ್ಬರು ಹೋಗುವುದನ್ನು ನಿಲ್ಲಿಸಿದಾಗ ನನಗೆ ತುಂಬಾ ಕೆಡುಕೆನಿಸಿತು.

ಸಕೀನಾಳ ಅಬ್ಬಾಜಾನ್ ಅಸರಫ್ ಅಂಕಲ್ ನಿಧನರಾಗಿದ್ದರು. ಅದೊಂದು ಸಂಜೆ ಮನೆಯಿಂದ ನಮಾಜಿಗೆ ಮಸೀದಿಗೆ ಹೋದರು; ನಮಾಜು ಮಾಡುವಾಗ, ಅಲ್ಲಿಯೇ ಹೊರಳಿದರು. ರೂಬಿ ಆಂಟಿಗೆ ಅಪಾರ ದುಃಖವಾಗಿತ್ತು. ಆಗಾಗ ತಮ್ಮ ದುಃಖವನ್ನು ತೋಡಿಕೊಳ್ಳುತ್ತಿದ್ದರು. ಅವರು ನನಗೂ ತಮ್ಮ ಕಥೆಯನ್ನು ಹೇಳಿದರು, 'ಅವರು ನಿತ್ಯ ಸಂಜೆ ಮಸೀದಿಯಿಂದ ಮನೆಗೆ ಬಂದು ಚಹಾ ಕುಡಿಯುತ್ತಿದ್ದರು. ನಾನು ಚಹಾ ಮಾಡಲು ನೀರಿಟ್ಟಿದ್ದೆ, ಆಗಲೇ ಇಬ್ಬರು ಮಸೀದಿಯಿಂದ ಬಂದು, ಅವರ ಆರೋಗ್ಯ ಅಕಸ್ಮಾತ್ ಬಿಗಡಾಯಿಸಿದೆ, ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದರು. ನಾನು ಆಸ್ಪತ್ರೆಗೆ ಹೋದಾಗ, ಅವರ ಜೀವ ಹೋಗಿತ್ತು. ಆಸ್ಪತ್ರೆಗೆ ಕರೆದೊಯ್ದಿದ್ದು ಔಪಚಾರಿಕತೆ ಮಾತ್ರವಾಗಿತ್ತು. ಅವರು ನನಗೆ ಹೇಳದೆಯೇ ಹೋದದ್ದು ತುಂಬಾ ದುಃಖವಾಗಿದೆ.

'ಅರವತ್ತೆರಡರ ವಯಸ್ಸು ಸಾಯೋ ವಯಸ್ಸಲ್ಲ...'

'ಕಾಯಿಲೆ ಮತ್ತು ಸಾವಿಗೆ ವಯಸ್ಸಿರುವುದಿಲ್ಲ' ಎಂದೆ.

'ನಮ್ಮ ಆಪ್ತರನ್ನು ಕಳೆದುಕೊಳ್ಳುವುದು... ನನಗೆ ಮೊದಲು ಈ ನೋವು ಅರ್ಥವಾಗಿರಲಿಲ್ಲ. ನಾನು ಮತ್ತು ಅಸರಫ್, ಮಾವ–ಅತ್ತೆಯ ಮಕ್ಕಳಾಗಿದ್ದೆವು. ಬಾಲ್ಯದಿಂದ ನಾವು ಜೊತೆಯಲ್ಲಿಯೇ ಇದ್ದೆವು. ಅವರಿಲ್ಲದೆ ಬದುಕು ಬೇಸರವೆನಿಸುತ್ತದೆ...' ಎನ್ನುವಾಗ ಅವರ ಕಣ್ಣುಗಳು ತುಂಬಿಬಂದವು.

ನಾನು ಅವರಿಗೆ ಸಲಹೆಯಿತ್ತೆ, 'ನೀವು ಕೆಲವು ದಿನ ಎಲ್ಲಿಗಾದರೂ ಹೋಗಿ ಬನ್ನಿ. ಅನಾಸನೊಂದಿಗೆ ಲಂಡನ್‌ಗೆ ಹೋಗಿ. ಮನಸ್ಸು ಬದಲಾಗುತ್ತೆ.'

'ಅನಾಸ್ ನನ್ನನ್ನು ತನ್ನ ಬಳಿಗೆ ಬರುವಂತೆ ಹೇಳುತ್ತಾನೆ, ಆದರೆ ನನಗೆ ಹೊರಗಿನ ದೇಶದ ಜೀವನ ಇಷ್ಟವಾಗಲ್ಲ. ಅಲ್ಲಿ ನನಗೆ ಉಸಿರುಗಟ್ಟಿದಂತಾಗುತ್ತದೆ. ಇಲ್ಲಿ ನನಗೆ ನಿನ್ನ ಅಪ್ಪನ ಆಸರೆಯಿದೆ. ಅವರು ನನಗೆ ತುಂಬಾ ಸಹಾಯ ಮಾಡ್ತಾರೆ. ಅವರು ನನ್ನ ಹಿರಿಯಣ್ಣನಂತಿದ್ದಾರೆ' ಎಂದು ರೂಬಿ ಆಂಟಿಯ ಕ್ಷೀಣ ಧ್ವನಿ ಇದ್ದಕ್ಕಿದ್ದಂತೆ ಏರಿತು.

ನಾನು ಮುಗುಳ್ನಕ್ಕೆ. ಕಾಲ ಅದೆಷ್ಟು ಪರಿವರ್ತನೆಯನ್ನು ತರುತ್ತದೆ...! ಒಂದು ಕಾಲದಲ್ಲಿ ಮೊಪ್ಪಿಲ್ಲಾ ಪರಿವಾರ ನಮ್ಮ ಕಟ್ಟಾ ಶತ್ರುವಾಗಿತ್ತು...

'ಹಗೆತನಕ್ಕೆ ಕಾರಣ?' ಪಾಲ್‌ನ ಪ್ರಶ್ನೆ.

ನಾನು ಮತ್ತು ನೀಲ್ ಒಂದೇ ತರಗತಿಯಲ್ಲಿ ಓದುತ್ತಿದ್ದೆವು, ಸಕೀನಾ ನಮಗಿಂತ ಎರಡು ವರ್ಷದ ಜೂನಿಯರ್ ವಿದ್ಯಾರ್ಥಿನಿಯಾಗಿದ್ದಳು. ಶಾಲೆಯಲ್ಲಿ ಅವಳಿಗೆ ಯಾರಾದರೂ ತೊಂದರೆ ಮಾಡಿದರೆ, ರೇಗಿಸಿದರೆ, ಅವಳು ನೇರವಾಗಿ ನನ್ನ ಬಳಿಗೆ ಬರುತ್ತಿದ್ದಳು. ನಾನು ಒಂದು ರೀತಿಯಲ್ಲಿ ಅವಳ ಸಲಹೆಗಾರ್ತಿ ಮತ್ತು ಸಂರಕ್ಷಕಳಾಗಿದ್ದೆ. ಬಾಲ್ಯದಲ್ಲಿ ಅವಳು ನನ್ನೊಂದಿಗೇ ಇರುತ್ತಿದ್ದಳು, ಆದರೆ ಕಿಶೋರಾವಸ್ಥೆಯಲ್ಲಿ ಅವಳು ನೀಲ್‌ನೊಂದಿಗೆ ಹೆಚ್ಚು ವೇಳೆಯನ್ನು ಕಳೆಯುತ್ತಿದ್ದಳು. ನಾನು ಅನೇಕ ಬಾರಿ ಅವರಿಬ್ಬರು ಅಡ್ಡಾಡುವಾಗ ಅವರನ್ನು ಹಿಡಿದೆ. ಆದರೂ ನಾನು ತಟಸ್ಥಳಾಗಿದ್ದೆ. ಇಬ್ಬರೂ ಒಬ್ಬರನ್ನೊಬ್ಬರು ಇಷ್ಟಪಡುತ್ತಿರುವ ವಿಷಯ ನನಗೆ ತಿಳಿದಿತ್ತು. ಅವರು ಜೊತೆಯಲ್ಲಿ ಅಡ್ಡಾಡುವುದನ್ನು ನೋಡಿದ ಅವರ ಕೆಲವು ಮುಸಲ್ಮಾನ್ ಮಿತ್ರರು ಸಕೀನಾಳ ತಾಯಿ ತಂದೆಗೆ, ನಿಮ್ಮ ಮಗಳು ಕ್ರೈಸ್ತ ಹುಡುಗನೊಂದಿಗೆ ಚೆಲ್ಲಾಟವಾಡುತ್ತಿದ್ದಾಳೆ ಎಂದು ಚಾಡಿ ಹೇಳಿದರು. ಸಕೀನಾಳ ತಾಯಿ–ತಂದೆ, ಅವರಿಬ್ಬರೂ ಸಂಧಿಸದಂತೆ ಬಿಗಿ ಮಾಡಿದರು. ಅವರು ನಮ್ಮ ಒಳ್ಳೆಯ ನೆರೆಮನೆಯವರಾಗಿದ್ದಾಗ್ಯೂ, ಅವರಿಗೆ ಸಕೀನಾಳ ನೀಲ್‌ನೊಂದಿಗಿನ ರೊಮಾನ್ಸ್ ಸರಿ ತೋರಲಿಲ್ಲ.

ಅದೊಂದು ರಾತ್ರಿ, ರೂಬಿ ಆಂಟಿ ಮೂತ್ರ ವಿಸರ್ಜನೆಗೆ ಎದ್ದರು. ಅವರು ಹೀಗೆಯೇ ಸಕೀನಾಳ ಕೋಣೆಯನ್ನು ನೋಡಿದರು. ಅವಳು ತನ್ನ ಹಾಸಿಗೆಯಲ್ಲಿ ಇರಲಿಲ್ಲ. ಅನಾಸ್ ಕೋಣೆಯಲ್ಲಿ ಒಂಟಿಯಾಗಿ ನಿದ್ರಿಸುತ್ತಿದ್ದ. ಅವರು ಅತ್ತ ಇತ್ತ ನೋಡಿದರೂ ಸಕೀನಾ ಕಾಣಬರಲಿಲ್ಲ. ಅವರು ತಮ್ಮ ಗಂಡನನ್ನು ಎಬ್ಬಿಸಿದರು. ಇಬ್ಬರೂ ಸೇರಿ ಸಕೀನಾಳನ್ನು ಮನೆಯ ಸುತ್ತಮುತ್ತ ಹುಡುಕಿದರು. ಛಾವಣಿ, ಸ್ನಾನದ ಮನೆ, ತೋಟ ಎಲ್ಲಾ ಕಡೆಗೂ ಹೋಗಿ ನೋಡಿದರು. ನಂತರ ಅವರು ನಮ್ಮ ಮನೆಯ ಕಡೆಗೆ ನೋಡಿದರು. ನೀಲ್‌ನ ಕೋಣೆ ಹೊರಗಿನ ವರಾಂಡದಿಂದ ಪ್ರತ್ಯೇಕವಾಗಿತ್ತು. ಅವನ ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ಅವರು ಗೋಡೆಯನ್ನು ದಾಟಿ ನೀಲ್‌ನ ಕೋಣೆಯ ಹೊರಗೆ ಬಂದಾಗ, ಅವರಿಗೆ ಒಳಗಿನಿಂದ ಸಕೀನಾ ಮಾತನಾಡುತ್ತಿರುವುದು ಕೇಳಿಸಿತು. ಅವರು ಬಾಗಿಲು ತಟ್ಟಿದಾಗ, ನೀಲ್ ಬಂದು ಬಾಗಿಲನ್ನು ತೆರೆದ.

(ಸಶೇಷ)